# ಮೈಸೂರು ವಿಶ್ವವಿದ್ಯಾನಿಲಯ

(4ನೇ ಆವೃತ್ತಿಯ ನ್ಯಾಕ್ ಮರು ಮಾನ್ಯತೆಯಲ್ಲಿ'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್.–2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

**ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು – 570006**

**ದೂರವಾಣಿ : 0821–2419318/386/429 e-mail : dswuommgm@gmail.com**


ಸಂಖ್ಯೆ: ವಿಕ್ಷೇಪಾ.2/24/ 668 /2019–20

ದಿನಾಂಕ: 21/09/2026

## ಸುತ್ತೋಲೆ

ವಿಷಯ: 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ 'ಸಹಕಾರ' ವಿಷಯ ಕುರಿತು ಕನ್ನಡ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸುವ ಬಗ್ಗೆ.

******

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು, ಇವರ ಸಹಯೋಗದಲ್ಲಿ 'ಸಹಕಾರ' ವಿಷಯ ಕುರಿತು ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯನ್ನು **ದಿನಾಂಕ: 09.10.2026ರ ಬೆಳಗ್ಗೆ 10.30 ಗಂಟೆಗೆ ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು** ಇಲ್ಲಿ ಏರ್ಪಡಿಸಲಾಗಿದೆ.

ಈ ಸ್ಪರ್ಧೆಗೆ ಪ್ರತಿ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದಿಂದ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಬಹುದು. ಚರ್ಚಾ ಸ್ಪರ್ಧೆಯ ವಿಷಯದ ಪರವಾಗಿ ಒಬ್ಬರು, ವಿರೋಧವಾಗಿ ಮತ್ತೊಬ್ಬರು ಮಾತನಾಡಬೇಕು. ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮೂರು ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ನೀಡಲಾಗುವುದು (ಪ್ರಥಮ, ದ್ವಿತೀಯ ಮತ್ತು ತೃತೀಯ).

ಈ ಸ್ಪರ್ಧೆಯಲ್ಲಿ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿ, ಪ್ರಥಮ ಸ್ಥಾನ ಪಡೆದ ತಲಾ ಇಬ್ಬರು ಸ್ನಾತಕ ಹಾಗೂ ಇಬ್ಬರು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಅಂತರ ವಿಶ್ವವಿದ್ಯಾನಿಲಯ ಮಟ್ಟದ ಚರ್ಚಾ ಸ್ಪರ್ಧೆಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಗಳನ್ನಾಗಿ ಕಳುಹಿಸಿಕೊಡಲಾಗುವುದು.

ಸ್ಪರ್ಧೆಗೆ 05 ನಿಮಿಷಗಳ (4+1) ಕಾಲಾವಕಾಶವಿರುತ್ತದೆ. ಸ್ಪರ್ಧೆಯ ವಿಷಯವನ್ನು ಕನ್ನಡದಲ್ಲೇ ಮಾತನಾಡಬೇಕು. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ವಯೋಮಿತಿಯು ದಿನಾಂಕ: 01–07–2026ಕ್ಕೆ 25 ವರ್ಷಗಳನ್ನು ಮೀರಿರಬಾರದು (ಈ ಬಗ್ಗೆ ಪ್ರಮಾಣ ಪತ್ರ ಅಗತ್ಯ). ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ಕಾಲೇಜಿನ ಪ್ರಾಂಶುಪಾಲರು/ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥರ ಮುಖಾಂತರ **ದಿನಾಂಕ: 05–10–2026ರ** ಒಳಗಾಗಿ ಈ ನಿರ್ದೇಶನಾಲಯಕ್ಕೆ ಅಂಚೆ ಅಥವಾ ಇ–ಮೇಲ್‌ಮೂಲಕ ತಲುಪುವಂತೆ ಕಳುಹಿಸಲು ಕೋರಿದೆ.

>>>>>>>>2

## ಚರ್ಚಾ ಸ್ಪರ್ಧೆಯ ವಿಷಯ

ಸ್ನಾತಕ ಪದವಿ (ಯು.ಜಿ.) ವಿದ್ಯಾರ್ಥಿಗಳಿಗೆ:

**"ಸಹಕಾರಿ ಚಳುವಳಿ ಮಾತ್ರವೇ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಬಲ್ಲದು."**

ಸ್ನಾತಕೋತ್ತರ ಪದವಿ (ಪಿ.ಜಿ.) ವಿದ್ಯಾರ್ಥಿಗಳಿಗೆ:

**"ಬಡತನ ನಿವಾರಣೆ, ನಿರುದ್ಯೋಗ ಸಮಸ್ಯೆಗೆ ಸಹಕಾರ ತತ್ವವೇ ಪರಿಹಾರ."**

ಮೇಲ್ಕಂಡ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಹೆಸರಿನ ಮುಂದೆ, ವಿಷಯದ ಪರ ಅಥವಾ ವಿರೋಧ ಎಂಬುದನ್ನು ನಮೂದಿಸಿ ಕಳುಹಿಸಬೇಕು. ಸ್ಪರ್ಧಾರ್ಥಿಗಳ ಮೊಬೈಲ್ ಸಂಖ್ಯೆ ಹಾಗೂ ಕಾಲೇಜಿನ ದೂರವಾಣಿ ಸಂಖ್ಯೆಯನ್ನೂ ಕಡ್ಡಾಯವಾಗಿ ನಮೂದಿಸತಕ್ಕದ್ದು.

22/9/2020

ನಿರ್ದೇಶಕರು
DIRECTOR OF STUDENT WELFARE
UNIVERSITY OF MYSORE, MYSURU

ಗೆ,

1. ಅಧ್ಯಕ್ಷರು ಹಾಗೂ ನಿರ್ದೇಶಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಮಾನಸಗಂಗೋತ್ರಿ, ಮೈಸೂರು
2. ಪ್ರಾಂಶುಪಾಲರು, ಮೈಸೂರು ವಿಶ್ವವಿದ್ಯಾನಿಲಯದ ಅಂಗ ಮತ್ತು ಸಂಯೋಜಿತ ಕಾಲೇಜುಗಳು, ಮೈಸೂರು ಜಿಲ್ಲೆ, ಮೈಸೂರು
3. ಪ್ರಾಂಶುಪಾಲರು, ಸಹಕಾರ ತರಬೇತಿ ಕೇಂದ್ರ, ಚಾಮರಾಜ ಜೋಡಿ ರಸ್ತೆ, ಮೈಸೂರು.
4. ಕಚೇರಿ ಕಡತಕ್ಕೆ.

*ವಿಶೇಷ ಸೂಚನೆ*: ವಿದ್ಯಾರ್ಥಿಗಳು ತಮ್ಮ ಕಾಲೇಜಿನ/ವಿಭಾಗದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.